## ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿ ಸಿ ನಂ. 824/2017

ದಿಃ **30-09-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಎಂ.ವಿ ಶೇಶಾದ್ರಿ | ಸಿ.ಡಬ್ಲ್ಯೂ | **19** |
| ವಯಸ್ಸು | 64 ವರ್ಷ | ಪಿ.ಡಬ್ಲ್ಯು: | **06** |
| ತಂದೆಯ / ಗಂಡನ ಹೆಸರು | ಲೇಟ್ ವೆಂಕಟರವಣಪ್ಪ | | |
| ವೃತ್ತಿ | ನಿವೃತ್ತ ಪೋಲೀಸ್ ಇನ್ಸ್ಪೆಕ್ಟರ್ | | |
| ವಾಸಸ್ಥಳ | ತುಮಕೂರು | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 18-09-2015 ರಿಂದ 27-07-2017 ರವರೆಗೆ ಗೌರಿಬಿದನೂರಿನ ವೃತ್ತ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೆ.

ದಿನಾಂಕ 26-10-2016 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-18 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 03-11-2016 ರಂದು 1 ನೇ ಆಪಾದಿತನನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಲಾರಿ ಸಂಖ್ಯೆ AP21X2038 ವಾಹನವನ್ನು ಆರ್.ಸಿ ಮಾಲೀಕನಾದ 2 ನೇ ಆಪಾದಿತನಿಗೆ ಸೂಕ್ತ ಭದ್ರತೆಯನ್ನು ಪಡೆದು ತಾತ್ಕಾಲಿಕ ತಾವಾಗೇ ಕೊಟ್ಟಿರುತ್ತೇವೆ. ಸಾಕ್ಷಿಗೆ ದಿನಾಂಕ 04.11.2016 ರ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ-3 ಮತ್ತು 11 ರಿಂದ 13 ರವರ ಹೇಳಿಕೆಗಳನ್ನು ಹಾಗೂ ಪ್ರಾಸಾ-2 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.. ಸಾಕ್ಷಿಗೆ ದಿನಾಂಕ 04-11-2016 ರ ಮರುಹೇಳಿಕೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 12 ಎ

ಎಂದು ಗುರುತಿಸಲಾಯಿತು. ದಿನಾಂಕ 04-11-2016 ರಂದು ನಿಪಿ-8 ರಂತೆ ವಾಹನ ತಪಾಸಣಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ-8 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-8 ಎ ಎಂದು ಗುರತಿಸಲಾಯಿತು.

ದಿನಾಂಕ 15-11-2016 ರಂದು ಫ್ರಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ದಿನಾಂಕ 15-11-2016 ರ ಹೇಳಿಕೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 13 ಎ ಎಂದು ಗುರುತಿಸಲಾಯಿತು. ದಿನಾಂಕ 13-01-2017 ರಂದು ಫ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಹಾಗೂ ಮೃತ ರವಿಕುಮಾರ್ ರವರ ಮರಣೋತ್ತರ ಪರೀಕ್ಷಾ ವರದಿಯನ್ನು ಚಾಸಾ-15 ರವರಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ-9 ಮತ್ತು 10 ಅನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-9 ಎ ಮತ್ತು 10 ಎ ಎಂದು ಗುರತಿಸಲಾಯಿತು. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ನನ್ನ ತನಿಖೆಯಲ್ಲಿ 2 ನೇ ಆಪಾದಿತನು ವಿಮಾ ಸೌಲಭ್ಯ ಇಲ್ಲದ ವಾಹನವನ್ನು 1 ನೇ ಆಪಾದಿತನಿಗೆ ಚಾಲನೆ ಮಾಡಲು ನೀಡಿದ್ದು, ಮತ್ತು 1 ನೇ ಆಪಾದಿತನು ಅಪಘಾತ ಪಡಿಸಿದ್ದು ದೃಢಪಟ್ಟ ಮೇರೆಗೆ 1 ಮತ್ತು 2 ನೇ ಆಪಾದಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆಪಾದಿತರನ್ನು ನೋಡಿ ಗುರುತಿಸಿದರು. ಸಾಕ್ಷಿಯು ನಿಪಿ-1 ರಿಂದ 5 ರಲ್ಲಿರುವ ವಾಹನವನ್ನು ನೋಡಿ ಅದೇ ವಾಹನ ಅಪಘಾತ ಪಡಿಸಿದ ವಾಹನವೆಂದು ಗುರುತಿಸಿದರು.

ಪಾಟೀ ಸವಾಲುಃ ಆಪಾದಿತರ ಪರ ಪರ ವಕೀಲರಾದ ಶ್ರೀ ಬಿ.ಎಲ್ ರವರಿಂದಃ

ನಾನು ಅಪಘಾತ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ. ಅಪಘಾತದ ವಿಚಾರವಾಗಿ ಸ್ಥಳೀಯರಲ್ಲಿ ವಿಚಾರಣೆ ಮಾಡಿಲ್ಲ. ಅಪಘಾತದ ಸ್ಥಳದಲ್ಲಿ ಮುಕ್ಕಾಲು ಅಡಿ ಎತ್ತರದ ರಸ್ತೆ ಉಬ್ಬು ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ನೆನಪಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಅಪಘಾತದ ವಿಚಾರವಾಗಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆಪಾದಿತರಿಂದ

ಯಾವುದೇ ತಪ್ಪು ಆಗಿಲ್ಲ ಎಂದು ತಿಳಿದಿದ್ದರೂ ಸಹ ಮೃತರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು